# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ಸಿ. ಸಿ. ನಂ. 820-2015

ಪ್ರಮಾಣ ಮಾಡಿದ ದಿನಾಂಕ : 13-08-2018

ಸಿ.ಡಬ್ಲ್ಯೂ: 01 ಪಿ.ಡಬ್ಲ್ಯೂ: 01

ಸಾಕ್ಷಿದಾರರ ಹೆಸರು : ಶ್ರಿಮತಿ ಕೆ.ಜಿ. ರೂಪಾ
ಗಂಡನ ಹೆಸರು : ಗಿರೀಶ್
ವಯಸ್ಸು : 40 ವರ್ಷ
ಉದ್ಯೋಗ : ಮನೆಗೆಲಸ
ವಾಸಸ್ಥಳ : ದಾವಣಗೇರೆ

## ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದ:-

ಚಾಸಾ 7 ರವರು ನನ್ನ ತಂದೆ ಆಗಿದ್ದು, ಚಾಸಾ 6 ರವರು ನನ್ನ ತಾಯಿಯಾಗಿರುತ್ತಾರೆ. ಚಾಸಾ 8 ರವರು ನನ್ನ ಗಂಡ. ನಾನು ಮತ್ತು ಚಾಸಾ 8 ರವರು ದಾವಣಗೇರೆಯಲ್ಲಿ ಇರುತ್ತೇವೆ. ಚಾಸಾ 6 ಮತ್ತು 7 ರವರ ಮನೆ ಹಂಪಸಾಗರ ಗ್ರಾಮದಲ್ಲಿ ಇದ್ದಿರುತ್ತದೆ. ಘಟನೆ ನಡೆದಾಗ ಚಾಸಾ 6 ಮತ್ತು 7 ರವರು ನಮ್ಮ ಸಂಬಂಧಿಕರನ್ನು ಬೇಟಿಯಾಗಲು ಪೂನಕ್ಕೆ ಹೋಗಿದ್ದರು. ದಿನಾಂಕ 13-12-2014 ರಂದು ಚಾಸಾ 9 ರವರು ಬೆಳಿಗ್ಗೆ 10 ಗಂಟೆಗೆ ಪೋನ್ ಮಾಡಿ ನಿಮ್ಮ ತಂದೆಯ ಮನೆಯಲ್ಲಿ ಕಳ್ಳತನ ವಾಗಿರುತ್ತದೆ ಎಂದು ವಿಷಯ ತಿಳಿಸಿದರು. ಆಗ ಚಾಸಾ 6 ಮತ್ತು 7 ರವರು ಪೂನ ದಲ್ಲಿ ಇದ್ದಿರುವುದರಿಂದ ನಾನು ಮತ್ತು ಚಾಸಾ 8 ರವರು ದಾವಣಗೇರೆಯಿಂದ ಬಂದು ನೋಡಲಾಗಿದ್ದು, ಮನೆಯ ಬೀಗವನ್ನು ಮುರಿದು, ಒಂದು ಕಟ್ಟಿಗೆ, ಬೀರೊವನ್ನು ಮತ್ತು 2 ಗಾರ್ಡೆಜ್‌ಗಳನ್ನು ಯಾರೋ ಕಳ್ಳರು ಮುರಿದು ಅದರಲ್ಲಿರುವ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ಚಲ್ಲಾ ಪಿಲ್ಲಿ ಮಾಡಿದ್ದರು. ಮನೆಯನ್ನು ನೋಡಿ ಮತ್ತು ನನ್ನ ತಾಯಿಯವರಿಗೆ ಪೋನ್ ಮಾಡಿ ಕೇಳಿದಾಗ ಅವರು ಹೇಳಿದಂತೆ 3 ಬಂಗಾರದ ಹಳ್ಳಿನ ಉಂಗುರಗಳು, ಎರಡು ಅಂಜಲಿ ಕಟ್ಟಿನ ಚೈನ್, ಮೂರು ಜೊತೆ ಜುಮುಕಿ ಬೆಂಡೋಲೆ, ಒಂದು ಬೊರ್ಮಾಳ ಸರ, ಒಟ್ಟು 9 ಬಂಗಾರದ ಉಂಗುರಗಳು, ಒಂದು ಸೈಕಲ್ ಮಾದರಿಯ ಚೈನ್, 5 ಜೊತೆ ಬೆಂಡೋಲೆ, 2 ಐದು ಗ್ರಾಮೀನ ಗಟ್ಟಿ ಬಂಗಾರದ ತುಂಡು, ಬೆಳ್ಳಿ ಸಮಾನುಗಳಾದ ಕುಂಕುಮ ಬರಣಿ, ಪನ್ನೀರು ಸಿಂಪಡಿಸುವುದು, ಬೆಳ್ಳಿ ತಟ್ಟೆ, ಬೆಳ್ಳಿ ನಾಣ್ಯ ಮತ್ತು ಇತರೆ ಬೆಳ್ಳಿ ಸಾಮಾನುಗಳು. 20 ರೇಷ್ಮೆ ಸೀರೆಗಳು, ನಗದು ಹಣ ರೂ.15,000/- ರಿಂದ ರೂ.17,000/- ಎಲ್ಲವೂ ಕಳ್ಳತನ ಆಗಿದ್ದವು. ಈ ಬಗ್ಗೆ ನಾನು ಪೊಲೀಸರಿಗೆ ಅದೇ ದಿನ ರಾತ್ರಿ 8 ಗಂಟೆಗೆ ದೂರನ್ನು ನೀಡಿ, ಮಾರನೇ ದಿನ ದಿನಾಂಕ 14-12-2014 ರಂದು ಪೊಲೀಸ್ ಸ್ಥಳಕ್ಕೆ ಭೆಟಿ ನೀಡಿ, ಚಾಸಾ 2 ಮತ್ತು 3 ರವರ

ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ಪೊಟೋಗಳನ್ನು ತೆಗೆದಿರುತ್ತಾರೆ. ಮಾರನೆ ದಿನಾ ದಿನಾಂಕ 14 ನಾವು ಬೀರೊವಿನಲ್ಲಿ ಪರೀಕ್ಷಿಸಿದಾಗ ಕೆಲವು ಬಂಗಾರ ಮತ್ತು ಬೆಳ್ಳಿಯ ವಸ್ತುಗಳು ಬಿರೋವಿನಲ್ಲಿಯೇ ಉಳಿದಿದ್ದವು. ಅವುಗಳು ನಮಗೆ ದೊರೆತಿದ್ದರಿಂದ ಈ ಬಗ್ಗೆ ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿದ್ದೆವು. ದಿನಾಂಕ 30-12-2014 ರಂದು ಪೊಲೀಸರು ಕಳ್ಳತನ ಮಾಡಿದ 3 ಜನ ಕಳ್ಳರನ್ನು ಹಿಡಿದಿರುವುದಾಗಿ ತಿಳಿಸಿದ್ದರಿಂದ, ನಾವು ಹೋಗಿ ನೋಡಿರುತ್ತೇವೆ. ಸದರಿ 3 ಆರೋಪಿತರಿಂದ ಪೊಲೀಸರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದ ಕೆಲವು ಆಭರಣಗಳನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ದಿನಾಂಕ 07-07-2015 ರಂದು ಪೊಲೀಸರು ಮತ್ತೆ ಇನ್ನೊಬ್ಬ ಆರೋಪಿತನನ್ನು ಸಹ ದಸ್ತಗಿರಿ ಮಾಡಿರುವುದಾಗಿ ತಿಳಿಸಿದ್ದರಿಂದ ನಾವು ಹೋಗಿ ಆರೋಪಿಯನ್ನು ನೋಡಿರುತ್ತೇವೆ. ನಂತರ ಪೊಲೀಸರು ಸದರಿ ಆರೋಪಿತನಿಗೆ ಕೆಲವು ಬಂಗಾರಗಳನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ನೋಡಿ ಗುರುತಿಸಿರುತ್ತೇನೆ. 4 ಜನ ಆರೋಪಿತರನ್ನು ವಿಚಾರಸಿದಾಗ ಅದರಲ್ಲಿ ಕೆಲವು ಆಭರಣಗಳನ್ನು ಯಾರ್‍ಯಾರಿಗೋ ಮರಿಕೊಂಡಿದ್ದು ದುಡ್ಡನ್ನು ಬಳಸಿಕೊಂಡಿದ್ದರು ಎಂದು ತಿಳಿದು ಬಂದಿರುತ್ತದೆ. ಮತ್ತು ಆರೋಪಿತರನ್ನು ವಿಚಾರಿಸಿದಾಗ ಅವರೇ ನಮ್ಮ ತಂದೆಯ ಮನೆಯನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಉಳಿದ ಆಭರಣಗಳನ್ನು ಆರೋಪಿತರಿಗೆ ತೋರಿಸಿ ಜಪ್ತಿ ಪಡಿಸಿಕೊಂಡಿರುತ್ತೇವೆ. ಈ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆ. ನಾನು ನೀಡಿದ ದೂರನ್ನು ನೋಡಲಾಗಿ ಅದನ್ನು ಗುರುತಿಸುತ್ತೇನೆ. ದೂರನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಬರೆದ ನಕಾಶೆಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ 4 ಪೊಟೋಗಳನ್ನು ನಿಪಿ 4 ರಿಂದ ನಿಪಿ 7 ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿಕೊಂಡ ಮಾಲುಗಳನ್ನು ಚಾಸಾ 7 ರವರು ಬಿಡಿಸಿಕೊಂಡಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಆದೇಶದ ಮೇರೆಗೆ ಮಾಲು ಬಿಡುಗಡೆ ಸಂದರ್ಬದಲ್ಲಿ ತೆಗೆದ ಪೋಟೋದಲ್ಲಿರುವ ಆಭರಣಗಳನ್ನು ಗುರುತಿಸುತ್ತೇನೆ. ಸದರಿ ಪೋಟೊವನ್ನು ನಿಪಿ 8 ಎಂದು ಗುರುತಿಲಾಯಿತು. ನಾನು ಪೊಲೀಸ್ ಠಾಣೆಯಲ್ಲಿ ಇದ್ದ ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಹಾಜರಾದ ಆರೋಪಿತರು ಒಂದೇ ಆಗಿರುತ್ತಾರೆ.

2 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಪಿರ್‍ಯಾದಿಯ ಮರು ಹೇಳಿಕೆಗಳನ್ನು ನಿಪಿ 9 ರಿಂದ ನಿಪಿ 11 ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು. ಮಾನ್ಯ ಎಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುವರು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಅರೋಪಿ 1 ಪರ ಶ್ರೀ ಪಿ.ಆರ್. ವಕೀಲರಿಂದ ಃ**

ನಾನು ಬಿ.ಕಾಂ ಪದವೀಧರೆ ಆಗಿರುತ್ತೇನೆ. ನಾನು ಮತ್ತು ನನ್ನ ಯಜಮಾನರು ಹಂಪಸಾಗರಕ್ಕೆ ಬಂದಾಗ ದಿನಾಂಕ 13-12-2014 ರಂದು ಸುಮಾರು 3-30 ರಿಂದ 4 ಗಂಟೆ ಆಗಿರುತ್ತದೆ. ಆಗ ಊರಿಗೆ ಬಂದ ನಂತರ ನನ್ನ ಚಿಕ್ಕಪ್ಪನನ್ನು ಭೇಟಿ ಮಾಡಿರುತ್ತೇನೆ. ನಾನು ಮತ್ತು ನನ್ನ ಚಿಕ್ಕಪ್ಪ ಇಬ್ಬರೂ ಮನೆಗೆ ಹೋಗಿರುತ್ತೇವೆ. ನಾವು ಮನೆಗೆ ಪ್ರವೆಶಸಿದಾಗ ಚಿಲಕ ಮುರಿದಿದ್ದು , ಡೋರ್ ತೆಗೆದಿರುತ್ತದೆ. ನಾವು ಮನೆಗೆ ಪ್ರವೇಶಿಸಿದಾಗ ಬಿರೊಗಳು ಮುರಿದಿದ್ದು, ಸಾಮಾನುಗಳು ಚೆಲ್ಲಾ ಪಿಲ್ಲಿ ಆಗಿದ್ದವು. ನನ್ನ ತಾಯಿಯವರಿಗೆ ದೂರವಾಣಿ ಮಾಡಿ ಮನೆಯಲ್ಲಿ ಯಾವ ಯಾವ ವಸ್ತುಗಳು ಇದ್ದವು ಎಂಬುದನ್ನು ತಿಳಿದುಕೊಂಡು ನಂತರ ಪಿರ್‍ಯಾದನ್ನು ನೀಡಿರುತ್ತೇನೆ. ನನ್ನ ತಾಯಿಗೆ ದೂರವಾಣಿ ಮಾಡಿದಾಗ ಸುಮಾರು ಸಾಯಂಕಾಲ 5-30 ಅಗಿರುತ್ತದೆ. ನನ್ನ ಪಿರ್‍ಯಾದನ್ನು ನನ್ನ ಕೈಬರಹದಿಂದ ಸಾಯಂಕಾಲ 7 ರಿಂದ 7-30 ಗಂಟೆಗೆ ಬರೆದು ಕೊಟ್ಟಿರುತ್ತೇನೆ. ಸದರಿ ಸಂದರ್ಬದಲ್ಲಿ ಪೊಲೀಸ್ ಠಾಣೆಯಲ್ಲಿ ನಾನು, ನನ್ನ ಗಂಡ, ಚಿಕ್ಕಪ್ಪ ನನ್ನ ಅತ್ತಿಗೆ ಮತ್ತು ನನ್ನ ಸಂಬಂಧಿಕರು ಇದ್ದಿರುತ್ತಾರೆ. ಸದರಿ ದೂರು ಕೊಟ್ಟ ನಂತರ ಪೊಲೀಸರು ಬಂದಿರುತ್ತಾರೆ ಪೊಲೀಸರ ಹೆಸರು ಹೇಳಲು ಆಗುವುದಿಲ್ಲ, ಆಗ ಸಮಯ ಮನೆಯ ಹತ್ತಿರ ಬಂದಾಗ ಸುಮಾರು ಬೆಳಿಗ್ಗೆ 10 ಗಂಟೆ ಆಗಿರುತ್ತದೆ. ಸದರಿಯವರು ಮನೆಯ ಹತ್ತಿರ ಬಂದು ನೋಡಿರುತ್ತಾರೆ. ನಾವು ಏನನ್ನು ಮುಟ್ಟಿರುವುದಿಲ್ಲ, ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಎಲ್ಲಾ ವಸ್ತುಗಳ ಪಂಚನಾಮೆಯನ್ನು ಮಾಡಿರುತ್ತಾರೆ. ಅದಕ್ಕೆ ಸಂಬಂದಪಟ್ಟಂತೆ ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ಮನೆಯಲ್ಲೆ ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಯಾರು ಹೇಳಿ ಬರೆಯಿಸಿದ್ದಾರೆಂಬುದು ನನಗೆ ನೆನಪಿರುವುದಿಲ್ಲ, ನಮ್ಮ ಮನೆಯಲ್ಲಿ ಇರುವಂತಹ ಬಂಗಾರದ ತರಹದ ಬಂಗಾರ, ಬೆಳ್ಳಿ, ರೇಷ್ಮೆ ಸೀರೆಗಳು ಆಚೆಯೂ ಸಿಗುತ್ತದೆ ಎಂದರೆ ಸರಿ. ನನಗೆ ನಿಖರವಾಗಿ ಆ ದಿನ ಬರೆದಂತಹ ಬಂಗಾರದ ಬೆಲೆಯನ್ನು ಹೇಳಲು ಆಗುವುದಿಲ್ಲ, ಸಾಕ್ಷಿ ಮುಂದುವರೆದು ಒಟ್ಟು 2 ಲಕ್ಷದ 70 ಸಾವಿರ ಅದರಲ್ಲಿ ಬರೆದಿರುತ್ತಾರೆ ಎಂದು ಹೇಳಿರುತ್ತಾರೆ. ಅದೇ ರೀತಿಯಾಗಿ ಪಂಚನಾಮೆ ಕಾಲಕ್ಕೆ ನಾನು, ನನ್ನ ಯಜಮಾನರು, ನನ್ನ ಚಿಕ್ಕಪ್ಪ ಮತ್ತು

ಪೊಲೀಸರು ಹಾಜರು ಇರುತ್ತಾರೆ. ಪಂಚನಾಮೆಗೆ ಸದರಿ ಸ್ಥಳದಲ್ಲಿ ಸೊನ್ನದ ಶ್ರೀಶೈಲಪ್ಪ, ಮಸ್ಕಿ ಸುಭಾಷ್ ಸಹಿ ಮಾಡಿರುತ್ತಾರೆ. ಅವರು ನಮ್ಮ ಸಂಬಂಧಿಕರು ಎಂದರೆ ಸರಿ. ಸದರಿ ಕಳುವಾದ ಮಾಲುಗಳು ಸಿಕ್ಕಿವೆ ಎಂದು ನನ್ನ ತಂದೆಯವರು ದೂರವಾಣಿ ಮೂಲಕ ಹೇಳಿರುತ್ತಾರೆ, ದಿನಾಂಕ 30-12-2014 ರಂದು ಸಾಯಂಕಾಲ 7 ಗಂಟೆಗೆ ಹೇಳಿರುತ್ತಾರೆ. ನಾನು ಆರೋಪಿಗಳನ್ನು ಪೊಲೀಸ್ ಠಾಣೆಯಲ್ಲಿ ನೋಡಿದಾಗ ಅವರು ಆ ದಿವಸ ಯಾವ ಬಣ್ಣದ ಉಡುಪುಗಳನ್ನು ತೊಟ್ಟಿದ್ದರು ಎಂಬುದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಆರೋಪಿಗಳನ್ನು ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ನಾನು ಹೇಳಿರುವಂತಹ ಬೆಳ್ಳಿ ಬಂಗಾರ ರೇಷ್ಮೆ ಸೀರೆ ಹಾಗೂ ಹಣ ನಮ್ಮ ಮನೆಯಿಂದ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಎಷ್ಟು ಹಣ ಕಳ್ಳತನ ಆಗಿತ್ತು ಎಂದು ನಿಖರ ವಾಗಿ ಹೇಳಲು ಆಗುವುದಿಲ್ಲ. ನಾನು ಪಿರ್ಯಾದಿ ನೀಡಿದಂತಹ ದಿನ ದಾವಣಗೇರೆಯಿಂದ ಹಂಪಸಾಗರಕ್ಕೆ ನನ್ನ ಗಂಡನೊಂದಿಗೆ ಬಂದಿರುವುದಕ್ಕೆ ಸಂಬಂದಪಟ್ಟಂತೆ ಬಸ್ ಟಿಕೆಟ್‌ನ್ನು ಪೊಲೀಸರಿಗೆ ನೀಡಿರುವುದಿಲ್ಲ. ನನ್ನ ತಾಯಿಗೆ ದೂರವಾಣಿ ಮಾಡಿರುವುದರ ಬಗ್ಗೆ ನಾನು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಾನು ಪೊಲೀಸರಿಗೆ ಎಷ್ಟು ಸಲ ಮರು ಹೇಳಿಕೇಯನ್ನು ನೀಡಿದ್ದೆನೆ ಎಂಬುದನ್ನು ಹೇಳಲು ಆಗುವುದಿಲ್ಲ. ನಮ್ಮದೇ ಬಂಗಾರ ಎಂಬುದನ್ನು ತೋರಿಸಲು ನಾನು ಪೊಲೀಸರಿಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನಮ್ಮ ಮನೆ ಕಳ್ಳತನ ಆಗಿಲ್ಲ, ನಾವು ದೂರು ಕೊಟ್ಟಿಲ್ಲ, ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಪಂಚನಾಮೆಯನ್ನು ಮಾಡಿಲ್ಲ, ಪಂಚನಾಮೆಯನ್ನು ಬರೆದಿಲ್ಲ, ಪಂಚರು ಇದ್ದಿರುವುದಿಲ್ಲ, ಯಾವುದೇ ಪೊಟೋಗಳನ್ನು ತೆಗೆದುಕೊಂಡಿರುವುದಿಲ್ಲ, ಹಾಗೂ ಮರು ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಕಳ್ಳತನಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೇ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಪಿರ್ಯಾದನ್ನು ನೀಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಇತರ ಆರೋಪಿತರ ವಕೀಲರಿಂದ ಆರೋಪಿ 1ನೇ ಆರೋಪಿಯ ಪಾಟೀ ಸವಾಲನ್ನು ಇತರ ಆರೋಪಿಗಳಿಗೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ :-ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೆಚ್ ಬಿ ಹಳ್ಳಿ.